# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 63

**ಅಪಾರ್ಟಮೆಂಟುಗಳಲ್ಲಿ ಗೃಹಪ್ರವೇಶ ಹೇಗೆ?**

**ನಮಸ್ಕಾರಗಳು, ಅಪಾರ್ಟಮೆಂಟಗಳಲ್ಲಿ ಮನೆ ಖರೀದಿಸಿದರೆ ವಾಸ್ತು ಶಾಂತಿ ಮಾಡಬೇಕೋ ಬೇಡವೋ? ಯಾಕೆ ಈ ಪ್ರಶ್ನೆ ಅಂದರೆ, ಅಲ್ಲಿ ಯಾವ ಕಾರ್ಯವೂ ಶಾಸ್ತ್ರೋಕ್ತ ವಿಧಿವಿಧಾನಗಳಿಂದ ಮಾಡಲು ಅನುಕೂಲ ಇರುವುದಿಲ್ಲ**

**(ex. ಗೋ ಮತ್ತು ಕರುವಿನ ಪ್ರವೇಶ this is just one example) ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು?**

**Or just we can enter how we use to enter into a rented house?**

**— ಎ. ಎಸ್. ಕುಲಕರ್ಣಿ.**

ಗೃಹಪ್ರವೇಶದಲ್ಲಿ ಪ್ರಧಾನವಾದ್ದು ಹೋಮಗಳು. ದುಷ್ಟಶಕ್ತಿಗಳ ನಿವಾರಣೆಗಾಗಿ ರಕ್ಷೋಘ್ನ ಹೋಮ,

ಮನೆಯಲ್ಲಿ ವಾಸ ಮಾಡುವ ಅರ್ಹತೆ ಒದಗಲು ವಾಸ್ತು ಹೋಮ.

ಎರಡನೆಯದು ಗೋ-ಬ್ರಾಹ್ಮಣ-ಸುವಾಸಿನಿ-ದೇವತಾವಸ್ತುಗಳ ಪ್ರವೇಶ.

ಯಾವುದೇ ಹೋಮವನ್ನು ಮಾಡಬೇಕಾದರೆ ಭೂಸ್ಪರ್ಶವಿರಲೇ ಬೇಕು. ಭೂಸ್ಪರ್ಶವಿಲ್ಲದ ಪ್ರದೇಶದಲ್ಲಿ ಅಗ್ನಿಸ್ಥಾಪನೆ ಮಾಡಲು ಬರುವದಿಲ್ಲ.

ಇವತ್ತು ನೆಲದ ಮನೆಗಳಲ್ಲಿ ಹೋಮ ಮಾಡಬೇಕಾದರೂ ಕಬ್ಬಿಣದ ಕುಂಡವನ್ನಿಟ್ಟು ಹೋಮ ಮಾಡುತ್ತಾರೆ. ಅನರ್ಥಕಾರಿಯಾದ ವಿಕೃತ ಆಚರಣೆಯದು. ಸಂಶಯವೇ ಇಲ್ಲ.

ಹೀಗಾಗಿ ಅಪಾರ್ಟುಮೆಂಟುಗಳಲ್ಲಿ ಮಾಡುವ ಹೋಮ ಪೂರ್ಣಪ್ರಮಾಣದಲ್ಲಿ ಶಾಸ್ತ್ರ ಸಮ್ಮತವಲ್ಲ. ಇನ್ನು ಮಾಡಿದರೂ ಅದನ್ನು ಇಟ್ಟಿಗೆ ಮರಳಿನ ಕುಂಡದಲ್ಲಿ ಮಾಡಬೇಕಷ್ಟೇ ಹೊರತು ಕಬ್ಬಿಣದ ಕುಂಡದಲ್ಲಿ ಮಾಡಬಾರದು.

ಇನ್ನು ಗೋವಿನ ಪ್ರವೇಶ.

ಸುಮುಹೂರ್ತದಲ್ಲಿ ಹಸುವನ್ನು ಮನೆಯ ಒಳಗಡೆ ಪ್ರವೇಶ ಮಾಡಿಸುವದರಿಂದ ಸಕಲ ಅರಿಷ್ಟಗಳೂ ದೂರವಾಗುತ್ತವೆ. ದೇವತಾಸನ್ನಿಧಾನ ಮೂಡುತ್ತದೆ. ಆದರೆ, ಇದನ್ನು ಅಪಾರ್ಟುಮೆಂಟುಗಳಲ್ಲಿ ಮಾಡಲು ಸಾಧ್ಯವಿಲ್ಲ. ಮಾಡಲೂಬಾರದು.

ಕೆಲವು ಅತಿರೇಕದ ಜನ, ಹಸುವನ್ನು ಲಿಫ್ಟಿನಲ್ಲಿ ಕರೆದುಕೊಂಡು ಹೋಗಿ ಪ್ರವೇಶ ಮಾಡಿಸಿದ್ದಾರೆ. ಒಂದು ಸಂದರ್ಭದಲ್ಲಂತೂ ಹಸುವಿನ ಕಾಲೇ ಮುರಿದು ಹೋಗಿದೆ. ಇಂತಹ ದುಸ್ಸಾಹಸವನ್ನು ಸರ್ವಥಾ ಮಾಡಬೇಡಿ. ಸಾಧುತನದ ಪ್ರತೀಕವಾದ ಗೋವುಗಳಿಗೆ ಒಂದು ಹುಲ್ಲಿನ ಕಡ್ಡಿಯಿಂದ ಹೊಡೆದರೂ ಮಹತ್ತರ ಅನರ್ಥವಿದೆ. ಅಂತಹುದರಲ್ಲಿ ಅದರ ಕಾಲು ಮುರಿಯುವದು ಯುಗಯುಗಗಳವರೆಗೆ ನಮ್ಮನ್ನು ನರಕದಲ್ಲಿ ಕೆಡವುಹ, ನಮ್ಮ ವಂಶಕ್ಕೇ ಕುತ್ತು ತಂದು ನೀಡುವ ದುಷ್ಕರ್ಮ, ಸರ್ವಥಾ ಮಾಡಬೇಡಿ.

ಇನ್ನು ಇವತ್ತಿನ ಹೋಮಗಳು, ನಿಜವಾಗಿಯೂ ನಾವು ಮಾಡುತ್ತಿರುವ ಅಪಚಾರಗಳೇ ಸರಿ. ತುಪ್ಪ ಕಲುಷಿತ. ಯಾವ ಪ್ರಾಣಿಯ ಕೊಬ್ಬು ಹಾಕಿ

ಮಾಡಿರುತ್ತಾರೋ ಬಲ್ಲವರಿಲ್ಲ. ಪದಾರ್ಥಗಳು ಕಲುಷಿತ. ಮಂತ್ರ ಪುರೋಹಿತರಿಗೇ ಸರಿಯಾಗಿ ಬರುವದಿಲ್ಲ. ಅರ್ಥ ಇಬ್ಬರಿಗೂ ಗೊತ್ತಿರುವದಿಲ್ಲ. ಇನ್ನು ಸಕಲ ಪದಾರ್ಥಗಳು ಪ್ಲಾಸ್ಟಿಕ್ಕುಮಯ. ಇದು ಹೋಮ ಹೇಗಾಗಲು ಸಾಧ್ಯ.

ಹೋಮವೂ ಇಲ್ಲ, ಗೋವೂ ಇಲ್ಲ. ಹಾಗಾದರೆ ಗೃಹಪ್ರವೇಶ ಹೇಗೆ ಎಂದು ನೀವು ಪ್ರಶ್ನೆ ಮಾಡಬಹುದು.

## ಸರ್ವಶ್ರೇಷ್ಠವಾದ ಉಪಾಯ ತಿಳಿಸುತ್ತೇನೆ —

ಶ್ರೀವೇದವ್ಯಾಸದೇವರ ಗೀತಾ-ಭಾರತ-ಭಾಗವತಗಳು, ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳು, ಶ್ರೀಮಟ್ಟೀಕಾಕೃತ್ಪಾದರ ಟೀಕಾಗ್ರಂಥಗಳು, ಶ್ರೀಮಚ್ಚಂದ್ರಿಕಾಚಾರ್ಯರ ವ್ಯಾಸತ್ರಯಗಳು, ಶ್ರೀಮದ್ವಾದಿರಾಜಗುರುಸಾರ್ವಭೌಮರ ಪರಮಮಂಗಳ ಗ್ರಂಥಗಳು, ಶ್ರೀಮನ್ ಮಂತ್ರಾಲಯಪ್ರಭುಗಳ ಮಹಾಗ್ರಂಥಗಳನ್ನು ಒಂದು ಮಂಟಪದಲ್ಲಿಟ್ಟುಕೊಂಡು, ನಿಮ್ಮ ಬಳಿ

ಹಣವಿದ್ದರೆ ಒಂದು ಪಲ್ಲಕ್ಕಿಯನ್ನೇ ತಂದು ಆ ಪಲ್ಲಕ್ಕಿಯಲ್ಲಿ ತಾರತಮ್ಯದ ಕ್ರಮದಲ್ಲಿ ಈ ಗ್ರಂಥಗಳನ್ನಿಟ್ಟು, ಆ ಗ್ರಂಥಗಳ ಜೊತೆಯಲ್ಲಿ ನಿಮ್ಮ ಮನೆಯ ದೇವರ ಪೆಟ್ಟಿಗೆಯನ್ನಿಟ್ಟು ಸುಮುಹೂರ್ತದ ಸಮಯಕ್ಕೆ ಆ ಪಲ್ಲಕ್ಕಿಯನ್ನು/ ಮಂಟಪವನ್ನು ಹೊತ್ತು ಗೃಹದೊಳಗೆ ಕಾಲಿಡಿ. ದೇವರ ಮನೆಯಲ್ಲಿ ಅವನ್ನಿಟ್ಟು ನೈವೇದ್ಯ ಮಾಡಿ ಮಂಗಳಾರತಿ ಮಾಡಿ. ಇದಕ್ಕಿಂತ ದೊಡ್ಡದಾದ ಅದ್ಭುತವಾದ ಪವಿತ್ರವಾದ ಗೃಹಪ್ರವೇಶ ಮತ್ತೊಂದಿರಲು ಸಾಧ್ಯವಿಲ್ಲ.

ನಾನು ಕೇವಲ ಹೇಳುವದಲ್ಲ, ಸ್ವಯಂ ಅನುಸರಿಸುವ ಕ್ರಮವಿದು. ಶ್ರೀಗುರುಗಳು ಅನುಗ್ರಹಿಸಿದ ಕಾವೇರಿ ತೀರದ ಸ್ಥಳದಲ್ಲಿ ನನ್ನ ಮನೆಗೆ ಗುದ್ದಲಿಪೂಜೆಯನ್ನು ಮಾಡಬೇಕಾದರೆ ಸಹಿತ ನನ್ನೊಡನೆ ಯಾರಿರಲಿಲ್ಲ. ಇದ್ದದ್ದು ಸಮಸ್ತ ಗ್ರಂಥಗಳು. ಕಾರಿನ ತುಂಬ ಗ್ರಂಥಗಳನ್ನು ತೆಗೆದುಕೊಂಡು ಹೋಗಿ ಅವನ್ನಿಟ್ಟು ಅವುಗಳ ಸನ್ನಿಧಾನದಲ್ಲಿ ಗುದ್ದಲಿ ಪೂಜೆ ಮಾಡಿದ್ದೆ. ಅವುಗಳನ್ನೇ ತಲೆಯ ಮೇಲೆ ಹೊತ್ತು ಮನೆಯ ಪ್ರವೇಶವನ್ನೂ ಮಾಡಿದ್ದೇನೆ.

ಕಾರಣ, ಈ ಗ್ರಂಥಗಳು ಕೇವಲ ಹಾಳೆ ಅಕ್ಷರಗಳಲ್ಲ. ಸಮಗ್ರ ಸಾವರಣಬ್ರಹ್ಮಾಂಡದಲ್ಲಿ ಲಕ್ಷ್ಮೀನಾರಾಯಣರ ಎಷ್ಟು ರೂಪಗಳಿವೆಯೋ (ನಮಗೆ ತಿಳಿಯಲೂ ಯೋಗ್ಯತೆ ಇಲ್ಲ) ಅಷ್ಟೂ ರೂಪಗಳು, ಅಷ್ಟೂ ರೂಪಗಳನ್ನು ಉಪಾಸನೆ ಮಾಡುವ ಭಾರತೀಪತಿ, ಸಮಸ್ತ ತತ್ವಾಭಿಮಾನಿದೇವತೆಗಳು, ಸಮಸ್ತ ಋಷಿಸಮುದಾಯ, ಸಮಸ್ತ ತೀರ್ಥಕ್ಷೇತ್ರಗಳು ಆ ಗ್ರಂಥಗಳಲ್ಲಿ ಮನೆಮಾಡಿವೆ. ಬ್ರಾಹ್ಮಣರಾದ ನಮಗೆ ಗ್ರಂಥಗಳೇ ಸರ್ವಸ್ವ. ಗ್ರಂಥಗಳೇ ತಂದೆ ತಾಯಿ, ಗ್ರಂಥಗಳೇ ಬಂಧುಬಳಗ, ಗ್ರಂಥಗಳೇ ಮುಕ್ತಿಗೆ ಕಾರಣ.

ಹೀಗಾಗಿ ಅಪಾರ್ಟುಮೆಂಟಿನಲ್ಲಾಗಲೀ, ನೆಲದ ಮನೆಯಾಗಲೀ, ಗುಡಿಸಲಾಗಲೀ, ಅರಮನೆಯಾಗಲೀ, ಅದರ ಪ್ರವೇಶೋತ್ಸವವನ್ನು ಮಾಡಬೇಕಾದರೆ ಈ ಗ್ರಂಥಗಳ ಸಮೇತವಾಗಿಯೇ ಮಾಡಬೇಕು. ಅದರಿಂದ ದೊರೆಯುವ ಸಂತೃಪ್ತಿ, ಪಾವಿತ್ರ್ಯ ಮತ್ತ್ಯಾವ ಕರ್ಮಗಳಿಂದಲೂ ದೊರೆಯುವದಿಲ್ಲ.

ಹಾಗಾದರೆ ಹೋಮವಿಲ್ಲದೇ ಮಾಡಬಹುದೇ ಎಂದು ನೀವು ಪ್ರಶ್ನೆ ಕೇಳಬಹುದು. ವೇದಗಳಲ್ಲಿಯೇ ಇದಕ್ಕೆ ಉತ್ತರವಿದೆ — **यजाम देवान् यदि शक्नवाम मा ज्यायसः शंसमावृक्षि देवाः** ಎಂದು.

"ಓ ದೇವತೆಗಳೇ, ಯಜ್ಞ ಮಾಡುವ ಶಕ್ತಿ ಇದ್ದರೆ, ಅರ್ಥಾತ್ ಎಲ್ಲ ರೀತಿಯ ಸೌಲಭ್ಯಗಳಿದ್ದರೆ ನಾವು ಯಜ್ಞ ಮಾಡುತ್ತೇವೆ. ಇಲ್ಲದ್ದಿದ್ದಲ್ಲಿ ನಮ್ಮಿಂದ ಸ್ತೋತ್ರವನ್ನು ಸ್ವೀಕರಿಸಿ, ಸ್ತೋತ್ರವನ್ನೂ ಮಾಡದಂತೆ ಮಾಡಬೇಡಿ" ಎಂದು ಇದರ ತಾತ್ಪರ್ಯ.

ಹೀಗಾಗಿ ಶುದ್ಧ ಪದಾರ್ಥಗಳಿದ್ದು ಹೋಮ ಮಾಡುವ ಸೌಲಭ್ಯವಿದ್ದಲ್ಲಿ ಅವಶ್ಯವಾಗಿ ಹೋಮ ಮಾಡಲೇಬೇಕು. ಆದರೆ, ಕಲುಷಿತವಾದ ಮತ್ತು ವಿಕೃತವಾದ ರೀತಿಯಲ್ಲಿ ಬೇಡ. ಗೃಹಪ್ರವೇಶ ಮಾಡುವ ಮುನ್ನ ಪ್ರಯತ್ನ ಪಟ್ಟು ಮಂತ್ರಗಳನ್ನು ಕಲಿಯಿರಿ. ಆ ಮಂತ್ರಗಳನ್ನು ಶುದ್ಧವಾದ ಕ್ರಮದಲ್ಲಿ ಹೊಸಮನೆಯಲ್ಲಿ ಕುಳಿತು ಪಠಿಸಿ.

ಆ ನಂತರ ನೀವೇ ಹೇಳಿದಂತೆ ವಿಷ್ಣುಸಹಸ್ರನಾಮ, ಗೀತಾ, ವಾಯುಸ್ತುತಿಗಳನ್ನು ಪಠಿಸಿ.

ಅದಕ್ಕಿಂತ ಉತ್ತಮವಾದ ಕಾರ್ಯ — ಶ್ರೀಮಧ್ವವಿಜಯ, ರಾಘವೇಂದ್ರಸ್ತೋತ್ರ ಪಾರಾಯಣದ ಸಂಘದವರನ್ನು ಕರೆಯಿಸಿ ಸಮಗ್ರ ಮಧ್ವವಿಜಯದ ಪಾರಾಯಣ ಮಾಡಿಸಿ. ನಾವು ಊಹಿಸಲೂ ಸಾಧ್ಯವಿಲ್ಲದಷ್ಟು ಮಹತ್ತರ ಫಲ ಶ್ರೀ ಮಧ್ವವಿಜಯದ ಪಾರಾಯಣದಿಂದ ದೊರೆಯುತ್ತದೆ.

ಆಚರಣೆ ಮಾಡಬೇಕು ಎನ್ನುವ ಭರದಲ್ಲಿ ವಿಕೃತ ಆಚರಣೆ ಬೇಡ. ಸಂಕೋಚದ ಆಚರಣೆ ಅವಶ್ಯವಾಗಿ ಮಾಡಬಹುದು. ಆದರೆ ವಿಕಾರವಾಗಬಾರದು. ಬಡತನವಿದೆ ಎಂದು ಭಿಕ್ಷೆಯನ್ನು ಬೇಡಿ ತಿನ್ನಬಹುದು, ಆದರೆ ಮೋರಿಯ ನೀರನ್ನು ಕುಡಿಯಲಾಗದಲ್ಲವೇ. ಕಾಲಕ್ಕೆ ತಕ್ಕಂತೆ ಸಂಕೋಚ ಮಾಡೋಣ. ಆದರೆ, ವಿಕಾರ ಮಾಡುವದು ಬೇಡ ಎನ್ನುವದು ನನ್ನ ಅಭಿಪ್ರಾಯ.

ಹದಿನಾಲ್ಕು ಲೋಕದ ಒಡೆಯ ಬರೆದ ಶ್ರೀಮತ್ ಸರ್ವಮೂಲಗ್ರಂಥಗಳನ್ನು, ಇಂದ್ರದೇವರು, ಪ್ರಹ್ಲಾದರಾಜರು ಬರೆದ, ಅವರ ಸನ್ನಿಧಾನಯುಕ್ತಾವಾದ ಮಹಾಗ್ರಂಥಗಳನ್ನು ಪಡೆದ ಸೌಭಾಗ್ಯವಂತರು ನಾವು. ಅವನ್ನು ಜೊತೆಯಲ್ಲಿಟ್ಟುಕೊಂಡೇ ಸಕಲ ಸತ್ಕರ್ಮಗಳನ್ನೂ ಮಾಡೋಣ.

ಶ್ರೀಹರಿ ಒಲಿಯುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

ವಿಶ್ವನಂದಿನಿಯ ಲೇಖನ, ಉಪನ್ಯಾಸ, ಪ್ರಶ್ನೋತ್ತರಗಳು
**Vishwanandini App** ಮತ್ತು
**www.vishwanandini.com Website** ಗಳ
ಮುಖಾಂತರ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯವಿದೆ.